2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ165/2021

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಗಿರೀಶ್ | ಪಿಡಬ್ಲೂ-3 |
| ತಂದೆಯ ಹೆಸರು | - | ಮಲ್ಲೇಶಪ್ಪ | ಸಿಡಬ್ಲೂ -2 |
| ವಯಸ್ಸು | - | 50 ವರ್ಷ | |
| ಉದ್ಯೋಗ | - | ವ್ಯವಸಾಯ | |
| ವಾಸ ಸ್ಥಳ | - | ಸಂತೆಕೆರೆಹಳ್ಳಿ | |

ದಿನಾಂಕಃ 03.10.2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ನ್ಯಾಯಾಲಯದಲ್ಲಿ ವೀಡಿಯೋ ಕಾನ್ಫರೆನ್ಸ್ ಮುಖಾಂತರ ಹಾಜರಿರುವ ಆರೋಪಿತರು ಗೊತ್ತಿಲ್ಲ. ಚಾಸಾ.1 ಗೊತ್ತಿಲ್ಲ. ಚಾಸಾ.3 ಮತ್ತು 4 ರವರು ಗೊತ್ತು. ಅವರು ನಮ್ಮ ಊರಿನವರು. ಕೋಡಿಹಳ್ಳಿ ಗ್ರಾಮದ ದೇವರಾಜು ನನ್ನ ಸ್ನೇಹಿತ.
2. ದಿನಾಂಕ 15.07.2021 ರಂದು ನಾನು ನನ್ನ ಮನೆಯಲ್ಲಿದ್ದ ಸಮಯದಲ್ಲಿ ಸಂಜೆ ಸುಮಾರು 4.00 ಗಂಟೆಗೆ ನನ್ನ ಸ್ನೇಹಿತನಾದ ಕೋಡಿಹಳ್ಳಿ ಗ್ರಾಮದ ದೇವರಾಜುರವರು ನನಗೆ ಫೋನ್ ಮಾಡಿ ಹೇಮಗಿರಿಯಿಂದ ಕೋಡಿಹಳ್ಳಿಗೆ ಹೋಗುವ ರಸ್ತೆಯ ಪಕ್ಕದಲ್ಲಿರುವ ಕೆರೆಯ ಏರಿಯ ಇಳಿಜಾರಿನಲ್ಲಿ ಯಾವುದೋ ಗಂಡಸಿನ ಶವ ಬಿದ್ದಿರುವುದಾಗಿ ತಿಳಿಸಿದರು. ನಾನು ಕೂಡಲೇ ಅರ್ಧ ಗಂಟೆಯಲ್ಲಿ ಅಂದರೆ ಸುಮಾರು 4.30 ಗಂಟೆಗೆ ಅಲ್ಲಿಗೆ ಹೋದೆನು. ಅಷ್ಟರಲ್ಲಿ ಜನರು ಅಲ್ಲಿ ಸೇರಿದ್ದರು.

ನಾನು ಅಲ್ಲಿಗೆ ಹೋದ ಬಳಿಕ ಕಡೂರು ಪೊಲೀಸರು ಅಲ್ಲಿಗೆ ಬಂದರು. ಸದರಿ ಗಂಡಸಿನ ಶವ ಕೆರೆಯ ಏರಿಯ ಇಳಿಜಾರಿನಲ್ಲಿ ಪೊದೆಗಳ ನಡುವೆ ಬಿದ್ದಿತ್ತು. ಶವದ ತಲೆಯ ಭಾಗದಲ್ಲಿ ರಕ್ತ ಹೊರಬಂದು ಹೆಪ್ಪು ಗಟ್ಟಿತ್ತು. ಶವದ ಮೇಲೆ ಖಾಕಿ ಬಣ್ಣದ ಯೂನಿಫಾರ್ಮ್ ಶರ್ಟ್ ಇತ್ತು. ಪೊಲೀಸರಿಗೆ ದೂರಿಗೆ ಎಂದು ಹೇಳಿ ನನ್ನ ಸಹಿಯನ್ನು ಪಡೆದುಕೊಂಡರು. ಸದರಿ ದೂರನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ದೂರನ್ನು ನಿಪಿ.10 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.10(ಎ) ಎಂದು ಗುರುತಿಸಲಾಯಿತು.

3. ನಂತರ ಪೊಲೀಸರು ಸದರಿ ಶವ ಬಿದ್ದಿದ್ದ ಸ್ಥಳದಲ್ಲಿ ಮಹಜರ್ ಮಾಡಿಕೊಂಡು ನನ್ನ ಸಹಿಯನ್ನು ಪಡೆದುಕೊಂಡರು. ಪೊಲೀಸರು 5.00 ಗಂಟೆಗೆ ಮಹಜರನ್ನು ಪ್ರಾರಂಭಿಸಿ ಸುಮಾರು ಅರ್ಧ ಗಂಟೆಯಿಂದ ಮುಕ್ಕಾಲು ಗಂಟೆವರೆಗೆ ಮಹಜರನ್ನು ಜರುಗಿಸಿದರು. ಸದರಿ ಮಹಜರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಮಹಜರ್ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಮಹಜನ್ನು ನಿಪಿ.11 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.11(ಎ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯ ಕಾಲಕ್ಕೆ ಚಾಸಾ.3 ಮತ್ತು 4 ರವರು ಹಾಜರಿದ್ದರು ಮತ್ತು ಅವರೂ ಸಹ ಮಹಜರ್ ಗೆ ಸಹಿ ಮಾಡಿದ್ದಾರೆ.

4. ಸಾಕ್ಷಿಗೆ ಎರಡು ಫೋಟೋಗಳನ್ನು ತೋರಿಸಲಾಗಿ ಅವುಗಳಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿ ಅವುಗಳನ್ನು ನಾನು ಪೊಲೀಸರಿಗೆ ಗಂಡಸಿನ ಶವ ಬಿದ್ದಿದ್ದ ಸ್ಥಳವನ್ನು ತೋರಿಸಿದ ಸಮಯದಲ್ಲಿ ಪೊಲೀಸರು ತೆಗೆದುಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ಫೋಟೋಗಳನ್ನು ನಿಪಿ.12 ಮತ್ತು ನಿಪಿ.13 ಎಂದು ಗುರುತಿಸಲಾಯಿತು. ಸದರಿ ಫೋಟೋಗಳಲ್ಲಿ ನನ್ನೊಂದಿಗೆ ಪೊಲೀಸರು, ಚಾಸಾ.3 ಮತ್ತು 4 ರವರು ಇದ್ದಾರೆ.

5. ಸಾಕ್ಷಿಯು ಈಗಾಗಲೇ ನಿಪಿ.1 ಎಂದು ಗುರುತಿಸಲಾಗಿರುವ ಫೋಟೋದಲ್ಲಿ ಆ ದಿನ ಕೆರೆಯ ಏರಿಯ ಇಳಿಜಾರಿನಲ್ಲಿ ಪೊದೆಯ ನಡುವೆ ಬಿದ್ದಿದ್ದ ಗಂಡಸಿನ ಶವ ಕಂಡು ಬರುತ್ತದೆ ಎಂದು ನುಡಿದಿರುತ್ತಾರೆ. ಶವದ ಮೇಲಿದ್ದ ಬಟ್ಟೆಗಳನ್ನು ಶವದೊಂದಿಗೆ ಕಡೂರು ಪೊಲೀಸರು ತೆಗೆದುಕೊಂಡು ಹೋದರು.

<u>ಪಾಟೀ ಸವಾಲುಃ ಶ್ರೀಮತಿ ಕೆ ಎಂ ಕೆ ಆರೋಪಿತರ ಪರ ವಕೀಲರಿಂದಃ</u>

6. ಶವ ಬಿದ್ದಿದ್ದ ಬಗ್ಗೆ ನನಗೆ ಮಾಹಿತಿ ಕೊಟ್ಟ ದೇವರಾಜು ನಮ್ಮ ಊರಿನವರಲ್ಲ, ಅವರು ಕೋಡಿಹಳ್ಳಿ ಗ್ರಾಮದವರು. ಮೃತಪಟ್ಟ ವ್ಯಕ್ತಿ ಯಾರು ಎಂದು ನನಗೆ ಗೊತ್ತಿಲ್ಲ. ಘಟನೆ ಯಾವಾಗ ನಡೆದಿದೆ ಎಂದು ನನಗೆ ಗೊತ್ತಿಲ್ಲ. ನಿಪಿ.11 ರಲ್ಲಿ ಬರೆದಿರುವ ಚೆಕ್ಕುಬಂದಿಯನ್ನು ಹೇಳಲಾಗುತ್ತದೆ ಎಂದರೆ ಸಾಕ್ಷಿ ಮೇಲ್ಭಾಗದಲ್ಲಿ ದಾರಿ ಇತ್ತು, ದಾರಿ ಪಕ್ಕದಲ್ಲಿ ಗುಡ್ಡವಿತ್ತು, ಗುಡ್ಡದ

ಇಳಿಜಾರಿನಲ್ಲಿ ಶವ ಬಿದ್ದಿತ್ತು. ನಾನು ಸ್ಥಳಕ್ಕೆ ಹೋದಾಗ ಅಲ್ಲಿ ಸುಮಾರು ಜನರು ಸೇರಿದ್ದರು. ನಿಪಿ.11 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ನಿಮಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಪೊಲೀಸರು ಹೇಳಿದ ಮೇರೆಗೆ ಸಹಿ ಮಾಡಿದ್ದೀರಿ ಎಂದರೆ ಸರಿ. ಶವದ ಮೇಲೆ ಖಾಕಿ ಬಣ್ಣದ ಯೂನಿಫಾರ್ಮ್ ಇತ್ತು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಪೊಲೀಸರ ಒತ್ತಡಕ್ಕೆ ಮಣಿದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲಃ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ.